ಅನುಬಂಧ–೨

ಈ ಕೆಳಗೆ ಸೂಚಿಸಿದ ಜಾಗಗಳಲ್ಲಿ ವೈದ್ಯರು, ಸ್ಟಾಫ್ ನರ್ಸ್‌ಗಳು, ಸಹಾಯಕ ಶುಶ್ರೂಷಾ ದಾದಿಯರು ಹಾಗೂ ಔಷಧಿ ವಿಂಶ್ರಕರ ಹುದ್ದೆಗಳು ಖಾಲಿ ಇವೆ.

೧.	ಉಪ ಶಸ್ತ್ರ ಚಿಕಿತ್ಸಕರು	೧. ಸಾರ್ವಜನಿಕ ಆಸ್ಪತ್ರೆ, ಚಿಂಚೋಳಿ
೨.	ಆರೋಗ್ಯಾಧಿಕಾರಿ ಹಾಗೂ ಸಹಾಯಕ ಶಸ್ತ್ರ ಚಿಕಿತ್ಸಕರು.	೨. ಚಿಂಚೋಳಿಯಲ್ಲಿ. ೧ ಪ್ರಾಥಮಿಕ ಆರೋಗ್ಯ ಘಟಕ–ಕುಂಚಾವರಮ್. ೧ ಪ್ರಾಥಮಿಕ ಆರೋಗ್ಯ ಘಟಕ–ಗದಿಕೇಶ್ವರ.
೩.	ದಂತ ವೈದ್ಯ	೧ ಸಾರ್ವಜನಿಕ ಆಸ್ಪತ್ರೆ, ಚಿಂಚೋಳಿ.
೩.	ಸ್ಟಾಫ್ ನರ್ಸ್‌ಗಳು.	೨ (೧) ಸಾರ್ವಜನಿಕ ಆಸ್ಪತ್ರೆ, ಚಿಂಚೋಳಿ. (೨) ಪ್ರಾಥಮಿಕ ಆರೋಗ್ಯ ಘಟಕ, ಸುಳೆಪೇಟೆ
೫.	ಸಹಾಯಕ ಶುಶ್ರೂಷಾ–ದಾದಿಗಳು	೧೩ ೧ ಸಾರ್ವಜನಿಕ ಆಸ್ಪತ್ರೆ, ಚಿಂಚೋಳಿ. ೩ ಪ್ರಾಥಮಿಕ ಆರೋಗ್ಯ ಕೇಂದ್ರ, ಕುಚಾವರಮ್ ೩ ಪ್ರಾಥಮಿಕ ಆರೋಗ್ಯ ಕೇಂದ್ರ, ಸೂಳೆಪೇಟೆ. ೩ ಪ್ರಾಥಮಿಕ ಆರೋಗ್ಯ ಘಟಕ, ಗದಿಕೇಶ್ವರ. ೧ ಸಬ್ಸಿಡಿರಿ ಆರೋಗ್ಯ ಕೇಂದ್ರ, ಚಂದನ ಕೆರಾ· ೨ ಪ್ರಾಥಮಿಕ ಆರೋಗ್ಯ ಘಟಕ, ಆಯನಾಪುರ. — ೧೩
೬.	ಔಷಧಿ ವಿಂಶ್ರಕರು	೪ ೧ ಸಾರ್ವಜನಿಕ ಆಸ್ಪತ್ರೆ, ಚಿಂಚೋಳಿ ೧ ಪ್ರಾಥಮಿಕ ಆರೋಗ್ಯ ಘಟಕ, ಕೊಡ್ಲಾ ೧ ಪ್ರಾಥಮಿಕ ಆರೋಗ್ಯ ಘಟಕ, ನಿಡುಗುಂದ. ೧ ಪ್ರಾಥಮಿಕ ಆರೋಗ್ಯ ಘಟಕ ಆಯನಾಪುರ.

ಶ್ರೀ ಎಸ್. ಬಿ. ಮಾಲಿಪಾಟೀಲ್ (ವೀರಯ್ಯಸ್ವಾಮಿ ಮಹಾಲಿಂಗಯ್ಯ ಇವರ ಪರವಾಗಿ).— ಅಧ್ಯಕ್ಷರೇ, ನಮಗೆ ಆಸ್ಪತ್ರೆಗಳಲ್ಲಿ ದಾದಿಯರು, ದಂತವೈದ್ಯರು ಮತ್ತು ಸ್ಟಾಫ್‌ನರ್ಸ್‌ಗಳು ಇಲ್ಲದ ಕಾರಣ ಬಹಳ ತೊಂದರೆಯಾಗುತ್ತಿದೆ, ಆದಕಾರಣ ತೀವ್ರವಾಗಿ ಅವರನ್ನು ನೇಮಕ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅದು ನಮ್ಮ ಗಮನಕ್ಕೆ ಬಂದಿದೆ. ದಾದಿಯರು ಟ್ರೈನಿಂಗ್ ಆಗಿ ಬರುತ್ತಿದ್ದಾರೆ. ಅವರನ್ನು ಆದಷ್ಟು ಜಾಗ್ರತೆ ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳು.

೬೮೪. ಶ್ರೀ ರಮೇಶ ಕುಮಾರ (ಶ್ರೀನಿವಾಸ ಪುರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ ಮತ್ತು ಸಂಯೋಕ್ತ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಸರ್ಕಾರದಿಂದ ವರ್ಗವಾಗಿರುವ ವೈದ್ಯರುಗಳು ಆಜ್ಞೆಯನ್ನು ಪುರಸ್ಕರಿಸದೆ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

ಇ) ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮ ಏನು ?

ಈ) ಈಗಾಗಲೇ ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಪ್ರಾಥಮಿಕ ಆರೋಗ್ಯ ಕೇಂದ್ರ	...	...	೧೮೫
ಪ್ರಾಥಮಿಕ ಆರೋಗ್ಯ ಘಟಕ	...	...	೧೫೦
		ಒಟ್ಟು	೩೩೫

(ಸಂಯುಕ್ತ ಆಸ್ಪತ್ರೆಗಳನ್ನು ಈಗ ಪ್ರಾಥಮಿಕ ಆರೋಗ್ಯ ಘಟಕಗಳೆಂದು ಕರೆಯಲಾಗಿದೆ)

ಆ) ೨೭ ಹುದ್ದೆಗಳು. (ದಿನಾಂಕ ೧೨-೮-೮೫ ರಲ್ಲಿರುವಂತೆ)

ಇ) ಕರ್ನಾಟಕ ಲೋಕಸೇವಾ ಆಯೋಗದ ಮುಂಖಾಂತರ ನೇರ ನೇಮಕಾತಿ ಮೂಲಕ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣ ಮುಗಿಸಿಕೊಂಡು ಬರುವ ಸೇವೆಯಲ್ಲಿರುವ ವೈದ್ಯರುಗಳ ಮರು ತೈನಾತಿ ಮೂಲಕ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಇದಲ್ಲದೆ ಸರ್ಕಾರ ಕೆಲವು ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿಶೇಷ ನೇರ ನೇಮಕಾತಿ ಮೂಲಕ ಆಯ್ಕೆಯಾಗಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಈ) ನೂರು ಮಹಿಳಾ ವೈದ್ಯರುಗಳನ್ನು ಹಾಗೂ ನೂರು ಸಹಾಯಕ ಶಸ್ತ್ರಚಿಕಿತ್ಸಕರನ್ನು ಆಯ್ಕೆ ಮಾಡಲು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದೆ.

ಲೋಕಸೇವಾ ಆಯೋಗಕ್ಕೆ ಈಗಾಗಲೇ ಇದರ ಬಗ್ಗೆ ಪತ್ರ ಬರೆದಿದ್ದೇವೆ, ನಾನು ಮೇಲೆ ಹೇಳಿದ ಹಾಗೆ ಅಲ್ಲಿಯವರೆಗೆ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಅವರನ್ನು ಅಪಾಯಿಂಟ್ ಮಾಡತಕ್ಕ ಯೋಚನೆ ಇಟ್ಟುಕೊಂಡಿದ್ದೇವೆ. ಅದರ ಮೇಲೆ ಈಗಾಗಲೇ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಿದ್ದೇನೆ.

ಶ್ರೀ ರಮೇಶ್ ಕುಮಾರ್.—ಅಧ್ಯಕ್ಷರೇ, ೨೭ ವೈದ್ಯರ ಹುದ್ದೆಗಳ ಬಗ್ಗೆ ಸರ್ಕಾರ ಅವರನ್ನು ವರ್ಗಮಾಡಿ ಸ್ಥಳೀಯರಿಂದ ತುಂಬಿಸಿರುವ ಆಜ್ಞೆಯನ್ನು ಅವರೇ ಪುರಸ್ಕರಿಸದೆ ಇರುವ ಕಾರಣ ಆ ಹುದ್ದೆಗಳು ಖಾಲಿ ಇವೆ, ಇದರಿಂದ ಜನರಿಗೆ ಅನಾನುಕೂಲ ಆಗುತ್ತಿರುವುದರಿಂದ ಅವರ ವಿರುದ್ಧ ಯಾವ ಕ್ರಮ ಸರ್ಕಾರ ಕೈಗೊಳ್ಳುತ್ತದೆ ? ಇದರ ಬಗ್ಗೆ ಇದುವರೆಗೆ ಏನಾದರೂ ಪ್ರಯತ್ನ ಸರ್ಕಾರ ಮಾಡಿದೆಯೇ ?

ಎರಡನೆಯದಾಗಿ, ಈಗ ೩೩೫ ವೈದ್ಯರುಗಳ ಹುದ್ದೆ ಖಾಲಿ ಇವೆ. ಈಗ ನೀವು ೧೦೦ ಮಹಿಳಾ ವೈದ್ಯರನ್ನು ಮತ್ತು ೧೦೦ ಅಸಿಸ್ಟೆಂಟ್ ಸರ್ಜನ್‌ಗಳನ್ನು ರೆಕ್ರೂಟ್‌ಮೆಂಟ್ ಮಾಡುವುದಕ್ಕೆ ಕೆ. ಪಿ. ಎಸ್. ಸಿ. ಗೆ ಅಡ್ರೆಸ್ ಮಾಡಿರುತ್ತೇವೆ ಎಂದು ಹೇಳಿರುತ್ತೀರಿ. ಎರಡು ನೂರು ಹುದ್ದೆಗಳು ನೇಮಕವಾದರೂ ಇನ್ನೂ ೧೩೫ ಹುದ್ದೆಗಳು ಖಾಲಿ ಉಳಿದಿರುತ್ತವೆ. ಇದರ ಜೊತೆಗೆ ಇನ್ನೂ ೫೦-೬೦ ವೈದ್ಯರುಗಳ ಹುದ್ದೆ ಖಾಲಿ ಆಗುತ್ತವೆ. ವೈದ್ಯರುಗಳನ್ನು ನೇಮಕ ಮಾಡುವ ವ್ಯವಸ್ಥೆಯನ್ನು ಮೊದಲು ಮಾಡದೆ ಆಸ್ಪತ್ರೆಗಳನ್ನು ಮಂಜೂರು ಮಾಡಿದರೆ ಹೇಗೆ ? ಇದರ ಬಗ್ಗೆ ಸೂಕ್ತವಾದ ಉತ್ತರವನ್ನು ತಾವು ಕೊಡಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಕೆ. ಪಿ. ಎಸ್. ಸಿ ಗೆ ಎಷ್ಟು ಜನರನ್ನು ನೇಮಕ ಮಾಡಿಕೊಳ್ಳಬೇಕೆಂದು ಬರೆದಿರುತ್ತೇವೆ ಅದಕ್ಕಿಂತ ೫೦ ಜನರನ್ನು ಹೆಚ್ಚಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಸ್ನಾತಕೋತ್ತರ ಪದವಿಯನ್ನು ಓದಲು ಹೋಗಿರುವವರು ವಾಪಸ್ಸು ಬರುತ್ತಾರೆ. ೧೦೦ ಹುದ್ದೆಗಳು ಹೆಚ್ಚಾಗಿ ಬೇಕಾಗಬಹುದು. ಇನ್ನೂ ೧೦೦ ಜನರನ್ನು ಹೆಚ್ಚಾಗಿ ಕಳಿಸಿಕೊಡಿ ಎಂದು ಪಿ. ಎಸ್. ಸಿ. ಯವರಿಗೆ ಹೇಳಿದರೆ ಅವರು ಕಳಿಸಿಕೊಡುತ್ತಾರೆ. ಆದ್ದರಿಂದ ಏನೂ ತೊಂದರೆಯಾಗುವುದಿಲ್ಲ. ಟ್ರಾನ್ಸ್‌ಫರ್ ಆಗಿದ್ದು ಹೋಗದಿರುವವರಲ್ಲಿ ಕೆಲವರಿಗೆ ನೋಟೀಸ್ ಕೊಟ್ಟಿದ್ದೇವೆ. ಎಂಟು ದಿವಸ ಅಥವಾ ಹದಿನೈದು ದಿವಸ ಒಳಗೆ ಡ್ಯೂಟಿಗೆ ಹೋಗದಿದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದೇವೆ. ಇನ್ನು ಕೆಲವರಿಗೆ ನೋಟೀಸ್ ಇಷ್ಯೂ ಮಾಡಿಲ್ಲ. ಅವರಿಗೂ ನೋಟೀಸ್ ಇಷ್ಯೂ ಮಾಡಿ ತಾವು ಹೇಳಿದ ಟೈಮಿನೊಳಗೆ ಹೋಗದಿದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಪ್ರೀಮೈನ ಮಾಡುತ್ತೇವೆ.